

## ದಿಕ್ಕು ಬದಲಿಸಿದ 'ಮಾಯಾಮೃಗ'

ಸಿರಿ ಕನ್ನಡದ ಧಾರಾವಾಹಿ 'ಮತ್ತೆ ಮಾಯಾಮೃಗ' ಸ್ವಲ್ಪ ಮೈ ಕೊಡವಿಕೊಂಡು ಹೊಸ ತಿರುವು ಪಡೆದಿದೆ. ಈಗ ಹೊಸ ಸ್ಪರ್ಶ ಸಿಕ್ಕಿದ್ದರಿಂದ ಚೆನ್ನಾಗಿ ಮೂಡಿಬರುತ್ತಿದೆ. ಆದರೆ, ಸರಸ್ವತಿಯ ಹಣಕ್ಕೆ ಕಣ್ಣು ಹಾಕಿ ಅವಳನ್ನು ಮದುವೆಯಾಗಲು ಅಭಿನಂದನ್ ಯೋಚಿಸಿದ್ದು, ನಿಶ್ಚಯವಾಗಿದ್ದ ವಧು ಮಹತಿಯನ್ನು ತಿರಸ್ಕರಿಸುವುದು ಬೇಸರ ಮೂಡಿಸಿತು.

ವೈಜಯಂತಿ ಜೀವನದಲ್ಲಿ ಯಶಸ್ಸು ಸಿಗದೆ ಆತ್ಮಹತ್ಯೆಗೆ ಯತ್ನಿಸಿದವಳು ಅಪಾಯದಿಂದ ಪಾರಾಗಿದ್ದಾಳೆ. ನಂತರ ಅವಳ ಜೀವನದ ದಿಕ್ಕೇ ಬದಲಾಗಿ ಸೆಲೆಬ್ರಿಟಿಯಾಗಿ ಬೆಳೆಯುವ ಕಲ್ಪನೆ ಧನಾತ್ಮಕವಾಗಿದೆ. ಕಮಲಮ್ಮಳ ಮಗ ಶಾಮ್ ಕ್ರೈಸ್ತ ಹುಡುಗಿಯನ್ನು ಮದುವೆ ಆಗುತ್ತಾನೆ. ಈ ಎಲ್ಲ ಬದಲಾವಣೆಯ ನಂತರ ಕಥೆಗೆ ಹೊಸ ರೂಪ ಬಂದಿದೆ.

—ಭಾರತೀ ಗಂಗಾಧರ್, ಬೆಂಗಳೂರು

## ಗಮನ ಸೆಳೆದ ಗವಾಯಿಗಳ ನಾಟಕ

ಚಂದನ ವಾಹಿನಿಯ ಕಾರ್ಯಕ್ರಮಗಳಲ್ಲಿ ಕೆಲವು ಮನ ಮುಟ್ಟುವ ಹಾಗೆ ಇರುತ್ತವೆ. ಈಚೆಗೆ ಪ್ರಸಾರವಾದ 'ಪುಟ್ಟರಾಜ ಗವಾಯಿ'ಗಳ ಕುರಿತ ನಾಟಕ ಬಹಳ ಚೆನ್ನಾಗಿ ಮೂಡಿಬಂದಿತು. ಕಲಾವಿದರ ಅಭಿನಯ ಸಹಜವಾಗಿತ್ತು. ಗವಾಯಿಗಳ ಪಾತ್ರದ ಸಂಭಾಷಣೆಗಳು ಅಮೋಘ. ಅವರ ಜೀವನದ ಅನೇಕ ಮಜಲುಗಳ ಪರಿಚಯವನ್ನು ಅವು ಮಾಡಿಕೊಟ್ಟವು.

—ಕಮಲಾದೇವಿ ರಾಜಶೇಖರ, ಹಳ್ಳೂರು

## ಹುಚ್ಚಮ್ಮ ಎನ್ನುವ ಆಧುನಿಕ ಅತ್ತಿಮಬ್ಬೆ

ಕಲರ್ಸ್ ಕನ್ನಡದ 'ಅನುಬಂಧ ಅವಾರ್ಡ್ಸ್'ನಲ್ಲಿ ಕೊಪ್ಪಳ ಜಿಲ್ಲೆಯ ಕುಣಿಕೇರಿಯ ಹುಚ್ಚಮ್ಮ ಅವರಿಗೆ ಪ್ರಶಸ್ತಿ ಕೊಟ್ಟಿರುವುದು ಸೂಕ್ತ ಎಂದೆನಿಸಿತು. ಅತ್ಯುತ್ತಮ ಆಯ್ಕೆ ಮಾಡಿದ ತಂಡಕ್ಕೆ ಅಭಿನಂದನೆಗಳು.

ಅನಕ್ಷರಸ್ಥೆ ಆಗಿದ್ದರೂ ತನ್ನ ಎರಡು ಎಕರೆ ಜಮೀನನ್ನು ಶಾಲೆಗೆ ಕೊಟ್ಟು, ಅನೇಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ಹುಚ್ಚಮ್ಮ ಬೆಳಕಾಗಿದ್ದಾರೆ. 75 ವರ್ಷದಲ್ಲೂ ದಿನಗೂಲಿಯಿಂದ ಜೀವನ ಸಾಗಿಸುತ್ತಿದ್ದಾರೆ. ಇನ್ನೂ ಜಮೀನು ಇದ್ದಿದ್ದರೆ ಅದನ್ನೂ ಕೊಡುತ್ತಿದ್ದೆ ಎನ್ನುವ ಆ ತಾಯಿಯ ಔದಾರ್ಯವನ್ನು ಹೇಳಲು ಶಬ್ದಗಳೇ ಇಲ್ಲ. ಮಾನವನ ಆಸೆಗೆ ಕೊನೆ ಎಲ್ಲಿ ಎನ್ನುವ ಪ್ರಶ್ನೆಗೆ ಉತ್ತರಿಸಲು ಇಂತಹ ಅಪರೂಪದ ವ್ಯಕ್ತಿತ್ವಗಳು ಸಿಗುತ್ತವೆ.

—ಎಸ್. ಶಶಿಧರ್, ಬೆಂಗಳೂರು

## ಕಾವಾಲಯ್ಯ, ಸಾಕಯ್ಯ, ದೇಸಿಕ್ರೀಡೆ ಬೇಕಯ್ಯ...

ಕಲರ್ಸ್ ಕನ್ನಡದ 'ಅನುಬಂಧ ಅವಾರ್ಡ್ಸ್' ಕಾರ್ಯಕ್ರಮದ ಕೊನೆಯ ಸಂಚಿಕೆಯಲ್ಲಿ ಎಳೆಯ ಮಕ್ಕಳು ಪ್ರದರ್ಶಿಸಿದ ಮಲ್ಲಕಂಬ ಅದ್ಭುತವಾಗಿತ್ತು!

ಹಿನ್ನೆಲೆಯಲ್ಲಿ 'ಪೈಲ್ವಾನ್' ಚಿತ್ರದ ಸಮಯೋಚಿತ ಗೀತೆ, ಮೈ ನವಿರೇಳಿಸುವ ಕಂಬದ ತುದಿಯ ಕಸರತ್ತು, ವಿಶಾಲ ವೇದಿಕೆ, ಕಣ್ಣು ಕುಕ್ಕುವ ಬೆಳಕು ನೋಡುಗರೆಲ್ಲರೂ ರೋಮಾಂಚನಗೊಂಡು ಎದ್ದು ನಿಂತು ಚಪ್ಪಾಳೆ ಹೊಡೆವ ದೃಶ್ಯ ಸ್ಮರಣೀಯ. 'ಕಾವಾಲಯ್ಯ...', 'ಬಸಂತಿ ನಾಚ್...' ಮೊದಲಾದ ಚರ್ವಿತ ಚರ್ವಣ ನೃತ್ಯ ಪ್ರದರ್ಶನಗಳ ಬದಲು ಇಂತಹ ಆಹ್ಲಾದಕರ ಸ್ವದೇಶಿ ಕ್ರೀಡೆಗಳನ್ನು ಕಾರ್ಯಕ್ರಮದಲ್ಲಿ ಸೇರಿಸುವುದು ಉಚಿತ. ಇದಕ್ಕೂ ಮುಂಚೆ ಇಂದುಶ್ರೀ ಅವರ 'ಮಾತನಾಡುವ ಗೊಂಬೆ'ಯ ಕಾರ್ಯಕ್ರಮವೂ ಚೆನ್ನಾಗಿತ್ತು.

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ

ವಾರದ ಪತ್ರ

## ರಾಷ್ಟ್ರೀಯವಾದಿ ವಾಹಿನಿ: ಹಾಗೆಂದರೇನು?

ಇತ್ತೀಚೆಗೆ 'ತಮ್ಮದು ರಾಷ್ಟ್ರೀಯವಾದಿ' ಸುದ್ದಿ ವಾಹಿನಿ ಎಂದು ಕೆಲವರು ಹೇಳಿಕೊಳ್ಳುತ್ತಿದ್ದಾರೆ. ಇದರರ್ಥ, ಬೇರೆ ಸುದ್ದಿ ವಾಹಿನಿಗಳು ದೇಶದ್ರೋಹಿಗಳು ಎಂದೇ? ಒಂದು ವಾಹಿನಿಯನ್ನು ರಾಷ್ಟ್ರೀಯವಾದಿ ಎಂದು ಕರೆಯಲು ಮಾನದಂಡವೇನು? ಈ ಬಿರುದನ್ನು ನೀಡುವವರು ಯಾರು? ಇದು ಸ್ವಘೋಷಿತವೇ? ಆಡಳಿತದಲ್ಲಿ ಇರುವ ಪಕ್ಷ ಮತ್ತು ಅದರ ನಾಯಕರನ್ನು ಹಾಡಿ ಹೊಗಳಿದರೆ ಅದು ರಾಷ್ಟ್ರೀಯವಾದಿ ವಾಹಿನಿಯಾಗುತ್ತದೆಯೇ? ಅವರನ್ನು ವಿರೋಧಿಸಿದರೆ ದೇಶದ್ರೋಹಿ ಆಗುತ್ತದೆಯೇ ಎನ್ನುವ ಜಿಜ್ಞಾಸೆ ಕಾಡುತ್ತಿದೆ. ವೈಚಾರಿಕವಾಗಿ ವೃತ್ತಿಧರ್ಮವನ್ನು ಪಾಲಿಸಿ ಸೈದ್ಧಾಂತಿಕ ಮತ್ತು ತಾರ್ಕಿಕವಾಗಿ ವ್ಯವಸ್ಥೆಯನ್ನು ವಿಮರ್ಶಿಸುವವರು ಏನಾಗುತ್ತಾರೆ?

—ರಮಾನಂದ ಶರ್ಮಾ, ಬೆಂಗಳೂರು

## ಮಾಣಿಕ್ಯವಾದರೂ ಮರುಪ್ರಸಾರ ಕಿರಿಕಿರಿಯೇ...

ಚಂದನ ವಾಹಿನಿಯಲ್ಲಿ ಗಾಯಕ ಕೆ. ಗುರುರಾಜ್ ನಡೆಸಿ ಕೊಡುವ 'ಮರೆಯದ ಮಾಣಿಕ್ಯ' ಕಾರ್ಯಕ್ರಮವನ್ನು ಮನೆಮಂದಿಯಲ್ಲ ಒಟ್ಟಿಗೆ ಕುಳಿತು ನೋಡಬಹುದು. ಅಷ್ಟು ಚೆನ್ನಾಗಿ ಇದು ಮೂಡಿಬರುತ್ತಿರುವುದು ನಮಗೆ ಹೆಮ್ಮೆ ಅನ್ನಿಸುತ್ತದೆ. 1970–80ರ ದಶಕದ ಕನ್ನಡ ಚಲನಚಿತ್ರಗಳ ಇಂಪಾದ ಗೀತೆಗಳನ್ನು ಗಾಯಕರು ಆಯ್ಕೆ ಮಾಡಿಕೊಳ್ಳುವುದು, ಆ ಗೀತೆಗಳನ್ನು ಇಂಪಾಗಿ ಹಾಡುವುದು ತುಂಬ ಇಷ್ಟವಾಗುತ್ತದೆ. ಆಗಾಗ ಈ ಕಾರ್ಯಕ್ರಮದ ಮರುಪ್ರಸಾರ ಮಾಡುವುದು ಕಿರಿಕಿರಿ ಅನ್ನಿಸುತ್ತದೆ. ಅದನ್ನು ಮೊದಲು ತಪ್ಪಿಸಿ.

—ಬೂಕನಕೆರೆ ವಿಜೇಂದ್ರ, ಮೈಸೂರು

## ಗಂಧರ್ವ ಗಾರುಡಿಗನ ಸ್ಮರಣೀಯ ಸ್ಮರಣೆ

ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಜನ್ಮದಿನದ ಅಂಗವಾಗಿ ಸ್ಟಾರ್ ಸುವರ್ಣದ 'ಸುವರ್ಣ ಸೂಪರ್ ಸ್ಟಾರ್' ಕಾರ್ಯಕ್ರಮದಲ್ಲಿ ಗಾಯಕರಾದ ಶಮಿತಾ ಮಲ್ನಾಡ್, ಅನುರಾಧ, ಸುನಿತಾ ಅವರು ಎಸ್.ಪಿ.ಬಿ. ಅವರ ಹಾಡುಗಳನ್ನು ಹಾಡಿದರು. ಜೊತೆಗೆ ಅವರ ನೆನಪನ್ನು ಹಂಚಿಕೊಂಡಿದ್ದು ಚೆನ್ನಾಗಿತ್ತು. ಒಂದೂವರೆ ತಾಸಿನ ಈ ಕಾರ್ಯಕ್ರಮವನ್ನು ಶಾಲಿನಿ ಚೆನ್ನಾಗಿ ನಡೆಸಿಕೊಡುತ್ತಾರೆ. ಮಧ್ಯದಲ್ಲಿ ಅವರ ಹಾಸ್ಯಚಟಾಕಿಯ ಮಾತುಗಳನ್ನು ಕೇಳುವುದೇ ಚಂದ. ಹೆಣ್ಣುಮಕ್ಕಳ ಈ ಕಾರ್ಯಕ್ರಮದಲ್ಲಿ ಅವರ ಕಷ್ಟ ಸುಖಗಳನ್ನು ಹಂಚಿಕೊಳ್ಳಲು ಇದೊಂದು ಒಳ್ಳೆಯ ವೇದಿಕೆಯಾಗಿದೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

## ಬಂದ್ ಬೆಂಬಲಿಸಬಹುದಿತ್ತು

ಕಾವೇರಿ ನೀರನ್ನು ತಮಿಳುನಾಡಿಗೆ ಬಿಡುತ್ತಿರುವುದನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಯ ಸುದ್ದಿಗಳನ್ನು ದಿನ ಪೂರ್ತಿ ನಮ್ಮ ಸುದ್ದಿ ವಾಹಿನಿಗಳು ಪ್ರಸಾರ ಮಾಡುತ್ತಲೇ ಇವೆ. ಅದನ್ನು 'ಎಲ್ಲೆಡೆ ಹರಡಿದ ಕಾವೇರಿ ಕಿಚ್ಚು', 'ಸಕ್ಕರೆ ನಾಡು ಧಗ ಧಗ' ಎಂದು ವರ್ಣಿಸುತ್ತಿವೆ. ಬೆಂಗಳೂರು ಬಂದ್ ವೇಳೆ ದಿನವಿಡೀ ಇದ್ದಿದ್ದನ್ನು ಇದ್ದ ಹಾಗೇ ತೋರಿಸದೇ ಕೊರೊನಾ ಸಂದರ್ಭದ ಚಿತ್ರವನ್ನು ತೋರಿಸಿ 'ಬೆಂಗಳೂರು ನೀರವ ಮೌನ' ಎಂದು ವಾಹಿನಿಯೊಂದು ಹೇಳಿದ್ದು ಬೇಸರ ಮೂಡಿಸಿತು. ಇದರ ಬದಲು ಕನಿಷ್ಠ ಪಕ್ಷ ಒಂದೇ ಒಂದು ಗಂಟೆಯ ಮಟ್ಟಿಗೆ ಸುದ್ದಿ ಪ್ರಸಾರ ಮಾಡುವುದನ್ನು ಸ್ಥಗಿತಗೊಳಿಸಿ 'ಬೆಂಗಳೂರು ಬಂದ್'ಗೆ ತಮ್ಮ ಬೆಂಬಲ ವ್ಯಕ್ತಪಡಿಸಬಹುದಾಗಿತ್ತು.

—ಆರ್. ವೀರೇಶ್ ಕುಮಾರ್, ಬೆಂಗಳೂರು